ದಿನಾಂಕಃ 02-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

1) ನನಗೆ ಈ ದಾವೆಯ ಬಗ್ಗೆ ಮಾಹಿತಿ ಇರುವುದಿಲ್ಲ. ರಾಜಮ್ಮ ನನ್ನ ತಾಯಿ. ನನ್ನ ತಾಯಿ ದಾವಾಸ್ವತ್ತಿನ ಸಂಬಂಧಪಟ್ಟಂತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ನಾನು ವಾದಿಯನ್ನು ನೋಡಿರುವುದಿಲ್ಲ. ವಾದಿ ಮತ್ತು ನನ್ನ ತಾಯಿ ನಡುವೆ ಆಗಿರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗೆ ಈ ದಾವೆಯನ್ನು ಜಮೀನು ವಿಷಯವಾಗಿ ದಾಖಲು ಮಾಡಿರುತ್ತಾರೆ. ನಾನು ಜಮೀನು ವಿಷಯವಾಗಿ 5 ವರ್ಷಗಳ ಹಿಂದೆ ದಾಖಲೆಗೆ ಸಹಿ ಮಾಡಿರುವುದಿಲ್ಲ. ನಾನಾಗಲೀ ಅಥವಾ ನಮ್ಮ ಕುಟುಂಬದ ಸದಸ್ಯರಾಗಲೀ ವಾದಿಯ ಪರವಾಗಿ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ.

2) ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಿಶಾನೆ.ಪಿ-6 ಕರಾರು ಪತ್ರದಲ್ಲಿ ಇರುವ ಸಹಿಗಳು ನಾನು ಮಾಡಿರುವುದಿಲ್ಲ. ನನ್ನ ತಾಯಿ ಸಹಿ ಅಥವಾ ಹೆಬ್ಬಟ್ಟು ಗುರುತು ಹಾಕುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ಅಕ್ಕ. 5 ನೇ ಪ್ರತಿವಾದಿ ನನ್ನ ತಮ್ಮ. ಮೃತ 6 ನೇ ಪ್ರತಿವಾದಿ ನನ್ನ ತಮ್ಮ. 4 ನೇ ಪ್ರತಿವಾದಿ ನನ್ನ ತಂಗಿ. ನಿಶಾನೆ.ಪಿ-6 ಕರಾರು ಪತ್ರದಲ್ಲಿ ನಾನು ಮತ್ತು ಪ್ರತಿವಾದಿ 1 ರಿಂದ 6 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ.ಪಿ-6 ಕರಾರು ಪತ್ರದಲ್ಲಿ ಇರುವ ಸಹಿಗಳು ನಾನು ಮತ್ತು ಇತರೇ ಪ್ರತಿವಾದಿಗಳು ಮಾಡಿದ್ದರೂ ಸಹ ನಾನು ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ಡೋರನಹಳ್ಳಿ ಗ್ರಾಮದಲ್ಲಿ ನಮಗೆ ಸೇರಿದ ಗದ್ದೆ ಜಮೀನು ಇರುತ್ತದೆ. ಸದರಿ ಆಸ್ತಿಯ ಸರ್ವೆ ನಂ. 1 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ಇತರೇ ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ

ಮಾಡುತ್ತೇವೆ ಎಂದು ಒಪ್ಪಿ ವಾದಿಯ ಪರವಾಗಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 29.08.2021 ರಂದು ಮೈಸೂರಿನ ವಕೀಲರಾದ ಶರತ್ ಚಂದ್ರ ಅರಸ್ ರವರ ಕಚೇರಿಯಲ್ಲಿ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ ಪಿ-6 ಕರಾರು ಪತ್ರದಲ್ಲಿ ಇರುವ ಸಹಿಗಳು ಯಾರದು ಎಂದು ನನಗೆ ಗೊತ್ತಿರುವುದಿಲ್ಲ.

4) ದಾವಾ ಸ್ವತ್ತನ್ನು ರೂ. 30 ಲಕ್ಷ ಹಣಕ್ಕೆ ಮಾರಾಟ ಮಾಡುತ್ತೇವೆ ಎಂದು ಒಪ್ಪಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ಮುಂಗಡ ಹಣವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ ಪಿ-6 ದಾಖಲೆ ಸುಳ್ಳು ದಾಖಲೆ ಆಗಿರುತ್ತದೆ. ನಾನು ಮತ್ತು ಇತರೇ ಪ್ರತಿವಾದಿಗಳು ವಾದಿಯನ್ನು ಶರತ್ ಚಂದ್ರ ಅರಸ್ ವಕೀಲರ ಕಚೇರಿಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಕ್ರಯ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

5) ನನಗೆ ನ್ಯಾಯಾಲಯದಿಂದ ಮಾತ್ರ ಸಮನ್ ಜಾರಿ ಆಗಿರುತ್ತದೆ. ನ್ಯಾಯಾಲಯದಿಂದ ಸಮನ್ ಜಾರಿ ಆದ ನಂತರ ಕರಾರು ಪತ್ರವನ್ನು ರದ್ದು ಮಾಡಲು ದಾವೆ ಸಲ್ಲಿಸಿರುವುದಿಲ್ಲ. ತಿಳುವಳಿಕೆ ಪತ್ರಕ್ಕೆ ವಕೀಲರ ಮೂಲಕ ಉತ್ತರ ನೀಡಿರುತ್ತೇವೆ. ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ ನೀಡಿದ ದಿನಾಂಕ ನೆನಪಿರುವುದಿಲ್ಲ. ಪ್ರತ್ಯುತ್ತರದಲ್ಲಿ ಏನು ಬರೆಯಲಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ವಾದಿಯ ಪರವಾಗಿ ಕರಾರು ಪತ್ರ ಬರೆದುಕೊಟ್ಟಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಸೇರಿದ್ದು, ನಂತರ ನನ್ನ ತಾಯಿಗೆ ಖಾತೆ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ